ಮಾಡುತ್ತಿದ್ದುವು. ಇಂಥ ಒಂದು ಕೆಟ್ಟ ಪದ್ಧತಿಯನ್ನು ತಪ್ಪಿಸುವ ಸಲುವಾಗಿ ಈ ಕಂಪ್ಯೂಟರ್ ವ್ಯವಸ್ಥೆಯನ್ನು ಮಾಡಿರುವುದು ನಿಜಕ್ಕೂ ಸ್ವಾಗತಾರ್ಹವಾದುದು ಮತ್ತು ಶ್ಲಾಘನೀಯವಾದುದು.

ANNOUNCEMENT

MR. DEPUTY SPEAKER.--It is my privilege and pleasure to inform this House that a parliamentary Delegation consisting of 8 members from the Republic of Cyprus led by His Excellency Mr George Ladas, President of Representatives of the Republic of Cyprus, has arrived in Bangalore today morning. The Hon'ble Members of the Delegation are now in the official gallery.

On my behalf and on behalf of the Hon'ble Members of this House I extend my hearty welcome to the Hon'ble Members of the Delegation I convey though to them, our Greetings and best wishes to their House of Representatives of the Republic of Cyprus and ths people of Cyprus.

3-30 P. M.

SRI A. LAKSHMISAGAR (Minister for Law & Parliamentary afftras) —Mr, Deputy Speaker, Sir, I deem it a great privilege to welcome the Cyprus Parliamentary Delegation who are Just now visiting Karnataka State and who are here in the Official Gallery I associate with the sentiments you have been pleased to express and I wish the delegation a happy stay in Bangalore in particular and Karnataka in general. I wish them all goodluck and good stay in our country.

†ಶ್ರೀ ಲಕ್ಷ್ಮೀನರಸಿಂಹಯ್ಯ.—ವಿಶ್ವಬ್ಯಾಂಕ್ ನೆರವಿನಿಂದ ಇಂಥ ಒಂದು ಪರಿಸ್ಥಿತಿಯಲ್ಲಿ ಹೆಚ್ಚಿನ ಜನರಿಗೆ ಉದ್ಯೋಗಗಳನ್ನು ಒದಗಿಸತಕ್ಕಂಥ ಕೆಲಸ ನಿರ್ಮಾಣ ಮಾಡುತ್ತಿರುವುದು ನಿಜವಾಗಿಯು ಒಂದು ಒಳ್ಳೆಯ ಕೆಲಸವಾಗಿರುತ್ತದೆ. 400 ಹೊಸ ಕೆರೆಗಳನ್ನು ನಿರ್ಮಾಣ ಮಾಡುತ್ತಿರುವ ಒಂದು ಅತ್ಯುತ್ತಮವಾದ ಕೆಲಸಕ್ಕೆ ಕೇಂದ್ರ ಸರ್ಕಾರದವರು ಹೆಚ್ಚಿನ ನೆರವು ಕೊಡುವುದರ ಜೊತೆಗೆ ಇಂಥ ಒಂದು ಕಾರ್ಯಕ್ರಮಕ್ಕೆ ಸಹಕಾರವನ್ನು ಕೂಡ ನೀಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇತ್ತೀಚೆಗೆ ಒಂದು ರಾಜಕೀಯ ಒತ್ತಡದಿಂದ ಅಥವಾ ಒಂದು ಶಾಶ್ವತವಾದ ಅಧಿಕಾರದಲ್ಲಿ ಉಳಿಯಲು ಮಾಡಿದಂಥ ಒಂದು ತೊಡಕು ಎಂದರೆ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಎಂದು ಏನು ಇದೆ ಇದು ಸಾಧನೆಯ ಬಗೆ ವಿಮುಖವಾಗಿ ದೇಶದಲ್ಲಿ ಒಂದು ಪ್ರಗತಿಯ ಸಾಧನೆಗೆ ಬಹಳ ಕುಂಠಿತವಾಗಿ ತಂದಿರತಕ್ಕಂಥ ವಿಷಯ ಎಂಬುದು ಎಲ್ಲರಿಗೂ ಗೊತ್ತಾಗಿರುತ್ತದೆ. ಆದ್ದರಿಂದ ದೇಶದ ಪ್ರಗತಿ ಏನು ಇದೆ ಅದು ಪ್ರತಿ ಹಂತದಲ್ಲೂ ಕೂಡ ಆಗಬೇಕು. ಅದಕ್ಕೆ ಏನಾದರೂ ತೊಂದರೆಗಳು ಬಂದರೆ ಅದನ್ನು ಯೋಜನೆಗಳ ಮೂಲಕ ಸರಿಪಡಿಸಿಕೊಂಡು, ಸರಿಯಾದ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡತಕ್ಕಂಥದ್ದು ನಮ್ಮ ಸರ್ಕಾರದ ಒಂದು ಉದ್ದೇಶವಾಗಿರತಕ್ಕಂಥದ್ದು ತುಂಬಾ ಸ್ವಾಗತಾರ್ಹವಾದ ವಿಷಯವಾಗಿರುತ್ತದೆ. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಮತ್ತು ಸಾಧನೆ ಮಾಡುವುದಕ್ಕೋಸ್ಕರವಾಗಿ ಪಶುಸಂಪತ್ತನ್ನು ವೃದ್ಧಿಗೊಳಿಸಲು ಹೆಚ್ಚಿನ ಆಸಕ್ತಿ ವಹಿಸಿರತಕ್ಕಂಥದ್ದು ನಮ್ಮ ಸರ್ಕಾರದ ಆಯವ್ಯಯಪತ್ರ ನಿಜವಾಗಿಯು ಕೂಡ ಸ್ವಾಗತಾರ್ಹವಾದುದಾಗಿರುತ್ತದೆ.

ಹಿಂದುಳಿದ ವರ್ಗಗಳಲ್ಲಿ ಯಾರು ಪ್ರತಿಭಾವಂತ ವಿದ್ಯಾರ್ಥಿಗಳಿರುತ್ತಾರೋ ಯಾರು ಅತ್ಯಂತ ಹೆಚ್ಚು ಅಂಕಗಳನ್ನು ಪಡೆಯುವ ಪ್ರತಿಯೊಬ್ಬ ವಿದ್ಯಾರ್ಥಿಗೆ 2,500 ರೂಪಾಯಿಗಳ ನಗದು ಪಾರಿತೋಷಕವನ್ನು ಕೊಡಲು ತೀರ್ಮಾನ ಮಾಡಿರತಕ್ಕಂಥದ್ದು ಕೂಡ ತುಂಬಾ ಸ್ವಾಗತಾರ್ಹವಾದ ವಿಚಾರವಾಗಿರುತ್ತದೆ. ಅದೇ ರೀತಿಯಲ್ಲಿ ಅಧಿಕಾರ ವಿಕೇಂದ್ರೀಕರಣ ಎಂಬುದು ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ, ಶ್ರದ್ಧೆಯನ್ನು ವಹಿಸಿ ಕೆಲಸಮಾಡತಕ್ಕಂಥದ್ದು. ಆ ಬಂದು ನುಟ್ಟದಲ್ಲೂ ಕೂಡ ಪ್ರಜಾಪ್ರಭುತ್ವದ ಅಭಿಪ್ರಾಯದಲ್ಲಿ ಅಧಿಕಾರ

† ಈ ಚಿಹ್ನೆಯು ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.